

ಅರಳಿದ ಗುಲಾಬಿ ಹಾಗೂ ಬಿಳಿ ಬಣ್ಣದ ಹೂಗಳ ಭಾರದಿಂದ ಬಾಗಿದ ಸಾವಿರಾರು ಚೆರ್ರಿ (Prunus) ಮರಗಳ ಸಾಲು ಸಾಲು. ಕಿರುಗುಡ್ಡಗಳನ್ನು ಪೂರ್ತಿ ಆವರಿಸಿ ವಿವಿಧ ಬಣ್ಣಗಳ ಪುಷ್ಪ ಗೊಂಚಲುಗಳಿಂದ ಬೀಗಿದ ಅಝೋಲಿಯ (Azalea) ಗುಲ್ಮಗಳು. ಚಿಕ್ಕ ಬೆಟ್ಟಗಳ ಮೇಲೆಲ್ಲ ಹೊದಿಕೆಯಂತೆ ಹರಡಿ ಬೆಳೆದ ನಿಮೋಫಿಲಾ (Nemophila) ಕಿರು ಸಸ್ಯಗಳ ಕಡುನೀಲಿ ಹೂಗಳು. ದಪ್ಪ ಕಾಂಡದ ಲಯಾನ ಏರುಬಳ್ಳಿಗಳಿಂದ ನೇತಾಡುವ ನೇರಳೆ ಬಣ್ಣದ ವಿಸ್ಟೇರಿಯಾದ (Wisteria) ಶೋಭಾಯಮಾನ ಹೂ ಮಾಲೆಗಳು...

ಅಮೆರಿಕ ಹಾಗೂ ಜಪಾನ್ ಪ್ರವಾಸದಲ್ಲಿ ನಾನು ಸಂದರ್ಶಿಸಿದ ನಾಲ್ಕು ಸಸ್ಯೋದ್ಯಾನಗಳಲ್ಲಿ ಬೆರಗು ಹುಟ್ಟಿಸಿದ್ದು ಹೂವಿಲಾಸ. ಮಾನವನಿರ್ಮಿತ ಉದ್ಯಾನಗಳಲ್ಲಿ ಒಂದೇ ಕಡೆ, ಒಂದೇ ಜಾತಿಯ, ಅಪಾರ ಸಂಖ್ಯೆಯ ಗಿಡಗಳು ಒಟ್ಟಿಗೆ ಹೂ ತಳೆದು ನಿಲ್ಲುವ ವಿದ್ಯಮಾನ ಯಾರನ್ನಾದರೂ



ರಂಗುರಂಗಿನ ಅಝೋಲಿಯ ಸೊಬಗು

ರಸಿಕರನ್ನಾಗಿಸೀತು. ಪ್ರತಿ ವರುಷ ಏಪ್ರಿಲ್–ಮೇ ತಿಂಗಳುಗಳಲ್ಲಿ ಈ ಪುಷ್ಪಸ್ಫೋಟಗಳು ಪುನರಾವರ್ತಿತ. ಅಕ್ಷರಶಃ, ಈ ಹೂ ಅವಧಿಯನ್ನು ಅಲ್ಲಿಯ ಜನ ಆಯಾ ಹೂವಿನ ಫೆಸ್ಟಿವಲ್ ಎಂದು ಕರೆದು ಹಬ್ಬವಾಗಿ ಆಚರಿಸುತ್ತಾರೆ. ವಾರದ ಅವಧಿಯಲ್ಲಿ ಲಕ್ಷಾಂತರ ಮಂದಿ ಈ ಉತ್ಸವಗಳಲ್ಲಿ ಭಾಗವಹಿಸುತ್ತಾರೆ.



## ಚೆರ್ರಿ ಮರಗಳ ಹೂ ಛತ್ರಿಗಳು

ಅಮೆರಿಕದಲ್ಲಿ ಚಳಿಗಾಲ ಮುಗಿದು ವಸಂತಕಾಲ ಅಡಿಯಿಡುತ್ತಿದ್ದಂತೆ, ವರ್ಜೀನಿಯಾ ಪ್ರಾಂತ್ಯದ ಆಶ್‌ಬರ್ನ್‌ನಲ್ಲಿರುವ ಭಾವನ ಮನೆಗೆ ಹೋಗಿದ್ದೆವು. ಮುಂದೆ ಒಂದು ತಿಂಗಳ ವರ್ಜೀನಿಯಾ ವಾಸ. ಅಮೆರಿಕದಂಥ ಸಮಶೀತೋಷ್ಣ ದೇಶಗಳಲ್ಲಿ ಸಸ್ಯಗಳು ವಸಂತ ಕಾಲದ ಆಗಮನದೊಂದಿಗೆ ನವಜೀವನ ಪಡೆಯುತ್ತವೆ. ಗಿಡ ಮರಗಳು ಪುಲ್ಲಕುಸುಮಿತವಾಗುತ್ತವೆ. ಕಾಕತಾಳೀಯವೋ ಎಂಬಂತೆ, ಈ ಸಮಯದಲ್ಲೇ ಹತ್ತಿರದ ವಾಷಿಂಗ್ಟನ್ ಡಿಸಿಯಲ್ಲಿ 'ಚೆರ್ರಿ ಬ್ಲಾಸಂ' ಎಂಬ ಪುಷ್ಪಹಬ್ಬ. ನಾವೂ ಹಬ್ಬಕ್ಕೆ ಹೋದೆವು. ನಗರದ ಮಧ್ಯಭಾಗದಿಂದ ಕಾಲ್ನಡಿಗೆಯಲ್ಲಿ ವಿಶಾಲವಾಗಿ ಹರಡಿದ ನಗರವನ್ನು ಹಾದು ಮುಂದೆ ಬಂದಾಗ ಎಲ್ಲಿ ನೋಡಿದರೂ ಹೂಗಳಿಂದ ತುಂಬಿ ತುಳುಕುತ್ತಿರುವ ಚೆರ್ರಿ ಮರಗಳು.

ಕಣ್ಣ ನೋಟಕ್ಕೆ ನಿಲುಕದಷ್ಟು ದೂರಕ್ಕೆ ಹರಡಿದ ವಿಶಾಲ ಬಯಲು. ಅದರ ಮಧ್ಯೆ ವಿಸ್ತಾರವಾದ ಪೊಟಮಕ್ ನದಿಯ ದಂಡೆಯುದ್ದಕ್ಕೂ ಬೆಳೆದು ನಿಂತ ಮೂರು ಸಾವಿರಕ್ಕೂ ಅಧಿಕ ಚೆರ್ರಿ ಮರಗಳು. ಯಾವುದೇ ಮರದಲ್ಲೂ ಒಂದೇ ಒಂದು ಎಲೆ ಇಲ್ಲ. ಬದಲಾಗಿ ಎಲ್ಲ ಮರಗಳಲ್ಲೂ ಬಿಳಿ/ನಸು ಗುಲಾಬಿ ಬಣ್ಣದ ಹೂಗಳ ಗೊಂಚಲು ಗೊಂಚಲುಗಳು. ಕೊಡೆಯಾಕಾರದ ಮರಗಳು ಪುಷ್ಪಛತ್ರಿಗಳಂತೆ ಕಂಗೊಳಿಸುತ್ತಿದ್ದವು.

ಮಾರ್ಚ್ ಅಂತ್ಯದವರೆಗೆ ಬೆತ್ತಲೆಯಾಗಿದ್ದ ಎಲ್ಲ ಮರಗಳೂ ಏಪ್ರಿಲ್ ಬಂದಂತೆ ಒಟ್ಟಿಗೆ ಮೊಗ್ಗೆಯೊಡೆದು ಹೂ ಬಿರಿದು ಮೇಳೈಸುತ್ತವೆ. ಪ್ರತಿವರ್ಷ ಏಪ್ರಿಲ್ ಎರಡನೇ ವಾರದಲ್ಲಿ ಎಲ್ಲಾ ಹೂಗಳು ತಮ್ಮ ಉಚ್ಛ್ರಾಯ ಹಂತಕ್ಕೆ ಬಂದು ಆಕರ್ಷಣೀಯ ಪರಿಸರ ನಿರ್ಮಿಸುತ್ತವೆ. ಜಪಾನೀಯರು ಈ ಗಿಡವನ್ನು 'ಸಕುರಾ' ಎನ್ನುವರು. ಅಲಂಕಾರಕ್ಕಾಗಿ ಬೆಳೆಸುವ ತಳಿಯ 3000 ಚೆರ್ರಿ ಗಿಡಗಳು 1912ರಲ್ಲಿ ಜಪಾನಿನ ಕೊಡುಗೆಯಾಗಿ ವಾಷಿಂಗ್ಟನ್ ಡಿಸಿಗೆ ಬಂದವಂತೆ. 1934ರಿಂದೀಚೆಗೆ ಪ್ರತಿ ವರ್ಷವೂ ಏಪ್ರಿಲ್ ತಿಂಗಳಲ್ಲಿ ಈ ಚೆರ್ರಿ ಗಿಡಗಳ ಹೂ ಬಿಡುವ ತಾರಕದ ಮೂರು ದಿನಗಳನ್ನು 'ಚೆರ್ರಿ ಬ್ಲಾಸಂ' ಹಬ್ಬವಾಗಿ ಆಚರಿಸುತ್ತಾರೆ.

## ಅಝೋಲಿಯ ಗುಲ್ಮಗಳ ಹೂಗುಚ್ಛಗಳು

ಏಪ್ರಿಲ್ ತಿಂಗಳೊಂದರಲ್ಲಿ ಜಪಾನಿನ ಟೋಕಿಯೊ ನಗರಕ್ಕೆ ಬರುವಂತೆ ನಮ್ಮ ಆತ್ಮೀಯ ಸಂಬಂಧಿಕರ ಪ್ರೀತಿಯ ಆಹ್ವಾನ. ಹದಿಮೂರು ಜನರ ಒಂದು ತಿಂಗಳ ವಾಸ. ಇದೂ ಒಂದು ಸೋಜಿಗವೇ! ಅಲ್ಲಿಯೂ ನನ್ನ ಸಸ್ಯನಂಟು ನಮ್ಮನ್ನು ಕೆಲವು ದಿನ ಸಸ್ಯೋದ್ಯಾನಗಳಿಗೆ ಆತಿಥೇಯರು ಕರೆದೊಯ್ಯಲು ಕಾರಣವಾಯಿತು.

ಮೊದಲ ದಿನ ಟೋಕಿಯೊ ನಗರದ ಸನಿಹದ ರೋಡೋಡೆಂಡ್ರಾನ್ (Rhododendron) ಜಾತಿಗೆ ಸೇರಿದ ಅಝೋಲಿಯ ಗಿಡಗಳ 300 ವರುಷಗಳ ಇತಿಹಾಸವುಳ್ಳ ಉದ್ಯಾನ. ಟೋಕಿಯೊ ಮುಖ್ಯ ರೈಲ್ವೆ ಸ್ಟೇಷನ್‌ನಿಂದ ಅರ್ಧ ತಾಸು ಪ್ರಯಾಣ. ಬುಂಕ್ಯೋ ಕು ತಲುಪಿದೆವು. ರೈಲು ಇಳಿದು ನೂರು ಹೆಜ್ಜೆ ಹಾಕಿದಾಗ ನೆಝು ಶ್ರಯ್ನ್ ದೇವಾಲಯ. 1900 ವರುಷಗಳ ಹಳೆಯ ದೇವಾಲಯ. ಇದರ ಒತ್ತಟ್ಟಿಗೆ ಇದೆ, ಸುಮಾರು ಎರಡು ಎಕರೆ ವಿಸ್ತಾರದ ಚಿಕ್ಕ ಗುಡ್ಡಗಳ ರಮಣೀಯ ದೃಶ್ಯ. 6600 ಚದರ ಮೀಟರ್ ವಿಸ್ತಾರದ ಇಳಿಜಾರಿನ ಗುಡ್ಡ ಸಂಪೂರ್ಣವಾಗಿ ಅಝೋಲಿಯ ಪೊದೆ ಗಿಡಗಳಿಂದ, ಅವುಗಳ ಹೂಗೊಂಚಲುಗಳಿಂದ ಮುಚ್ಚಿಹೋಗಿದೆ. ಕಾಲುದಾರಿಯನ್ನು ಹೊರತುಪಡಿಸಿ ಗುಡ್ಡವನ್ನು